**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ.16.04.2025**

**ಪಾಟಿ ಸವಾಲುಃ ಪ್ರತಿವಾದಿ ಪರ ಶ್ರೀ.ಎನ್ ಆರ್ ಆರ್ ವಕೀಲರಿಂದಃ**

1. ವಾದಿಯು ದಾರಿಯನ್ನು ಕೋರಿ ಪ್ರತಿವಾದಿ ವಿರುದ್ದ ಈ ದಾವೆಯನ್ನು ಸಲ್ಲಿಸಿರುತ್ತಾರೆ. ವಾದಿ ಮತ್ತು ಪ್ರತಿವಾದಿ ಇಬ್ಬರು ಸಹ ಕೋಡಗಲಹಟ್ಟಿ ಗ್ರಾಮದವರು. ನಾನು ವಾದಿ ಪರವಾಗಿ ಸಾಕ್ಷಿ ನುಡಿಯುತ್ತಿದ್ದೇನೆ. ಆ ರೀತಿ ವಾದಿಯು ದಾರಿ ಅಸ್ಥಿತ್ವದಲ್ಲಿದ್ದು, ಅದರಲ್ಲಿ ನಾನು ಓಡಾಡುತ್ತಿದ್ದೇನೆ ಎಂದು ಹೇಳಿಕೊಟ್ಟಂತೆ ನಾನು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾವೆಯನ್ನು ಸರ್ವೆ ನಂ.153/1 ಆಸ್ತಿಗೆ ಸಂಬಂದಿಸಿದಂತೆ ದಾವೆ ಸಲ್ಲಿಸಿರುತ್ತಾರೆ. ಸದರಿ ಆಸ್ತಿಯು ಪ್ರತಿವಾದಿಯ ಆಸ್ತಿ ಆಗಿರುತ್ತದೆ. ಸರ್ವೆ ನಂ.153/2 ವಾದಿಯ ಆಸ್ತಿ ಆಗಿರುತ್ತದೆ. ಪ್ರತಿವಾದಿಯ ಆಸ್ತಿಗೆ ಚೆಕ್ಕುಬಂದಿ ಪೂರ್ವಕ್ಕೆ-ವಾದಿಯ ಜಮೀನು, ಪಶ್ಚಿಮಕ್ಕೆ-ರಸ್ತೆ, ಉತ್ತರಕ್ಕೆ-ಡ್ರೀಮ್ ಲ್ಯಾಂಡ್, ದಕ್ಷಿಣಕ್ಕೆ-ಯಲಹಂಕ ರವರ ಆಸ್ತಿ. ವಾದಿಯ ಆಸ್ತಿಗೆ ಚೆಕ್ಕುಬಂದಿ ಪೂರ್ವಕ್ಕೆ-ಡ್ರೀಮ್ ಲ್ಯಾಂಡ್, ಪಶ್ಚಿಮಕ್ಕೆ-ಪ್ರತಿವಾದಿಯ ಆಸ್ತಿ, ಉತ್ತರಕ್ಕೆ-ಡ್ರೀಮ್ ಲ್ಯಾಂಡ್, ದಕ್ಷಿಣಕ್ಕೆ-ಯಲಹಂಕ ಮತ್ತು ಬೈಲಪ್ಪ ರವರ ಆಸ್ತಿ.

2. ನಾನು ಹೇಳಿದಂತೆ ವಾದಿ ಆಸ್ತಿಯ ಚೆಕ್ಕುಬಂದಿಯಲ್ಲಿ ಯಾವುದೇ ರಸ್ತೆ ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿಗಳ ಆಸ್ತಿಯ ಅಕ್ಕಪಕ್ಕದಲ್ಲಿ ನಮಗೆ ಸೇರಿದ್ದ ಯಾವುದೇ ಆಸ್ತಿ ಪ್ರಸ್ತುತ ಇರುವುದಿಲ್ಲ. ನಾನು ಕೋಡಗಲಹಟ್ಟಿ ಗ್ರಾಮದಲ್ಲಿ ವಾಸವಾಗಿರುವ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ನಾನು ಕೋಡಗಲಹಟ್ಟಿ ಗ್ರಾಮದಲ್ಲಿ ವಾಸವಾಗಿಲ್ಲದ ಕಾರಣ ನ್ಯಾಯಾಲಯಕ್ಕೆ ದಾಖಲೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ, ವಾದಿ ಮತ್ತು ಪ್ರತಿವಾದಿಗಳ ಚೆಕ್ಕುಬಂದಿಯನ್ನು ವಾದಿಯು ಹೇಳಿಕೊಟ್ಟಂತೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯು ರಸ್ತೆಯನ್ನು ಕೋರಿ ಈ ದಾವೆ ಸಲ್ಲಿಸಿರುತ್ತಾರೆ. ಆ ರೀತಿ ರಸ್ತೆಯುಎ ಇರುವ ಬಗ್ಗೆ ನಾನು ಯಾವುದೇ ದಾಖಲೆಯನ್ನು ನೋಡಿರುವುದಿಲ್ಲ. ಸಿ ಷೆಡ್ಯೂಲ್ ಆಸ್ತಿಯ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಹೇಳಿರುವ ಸಿ ಷೆಡ್ಯೂಲ್ ಆಸ್ತಿಯು ಅಸ್ಥಿತ್ವದಲ್ಲಿ ಇಲ್ಲದೇ ಇದ್ದರೂ ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ.

3. ದಾವಾ ಆಸ್ತಿಯು ಮೂಲತಃ ಮಠದ ಆಸ್ತಿ ಆಗಿರುತ್ತದೆ. ದಾವಾ ಅಸ್ತಿಯ ಮೇಲೆ ಕಂದಾಯ ಇಲಾಖೆಯಲ್ಲಿ ಆಗಿರುವ ಅರ್ಜಿಗಳ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರವ 1960 ರಲ್ಲಿ ಆಗಿರುವ ವ್ಯವಹಾರಗಳ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯ 5 ನೇ ಖಂಡಿಕೆಯಲ್ಲಿ ಸುಳ್ಳು ಮಾಹಿತಿ ನೀಡಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ನಮಗೆ ಸೇರಿದ ಯಾವುದೇ ಆಸ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ಸಿ ಷೆಡ್ಯೂಲ್ ಆಸ್ತಿಯ ಅಸ್ಥಿತ್ವದಲ್ಲಿರುವುದಿಲ್ಲ ಮತ್ತು ಅದರಲ್ಲಿ ಯಾರು ಓಡಾಡದೇ ಇದ್ದರೂ ಸುಳ್ಳು ಮಾಹಿತಿ ನೀಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ 6 ನೇ ಖಂಡಿಕೆಯಲ್ಲಿ ಸುಳ್ಳು ಮಾಹಿತಿ ನೀಡಿದ್ದೇನೆ ಎಂದರೆ ಸರಿಯಲ್ಲ. ಸಿ ಷೆಡ್ಯೂಲ್ ಆಸ್ತಿಯನ್ನು ವಾದಿಯ

ತಾತ, ತಂದೆ ಉಪಯೋಗಿಸುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಿ ಷೆಡ್ಯೂಲ್ ಆಸ್ತಿಯನ್ನು ಹೊರತು ಪಡಿಸಿ ಬೇರೆ ದಾರಿ ವಾದಿಗಳಿಗೆ ಇರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ಪ್ರತಿವಾದಿ ಯಾವುದೇ ತೊಂದರೆ ಮಾಡದೇ ಇದ್ದರೂ, ವಾದಿಯ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಹೇಳಿಕೊಟ್ಟಂತೆ ಪ್ರತಿವಾದಿ ತೊಂದರೆ ಮಾಡಿದ್ದಾರೆ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯು ಪೋಲಿಸ್ ಠಾಣೆಗೆ ಹೋಗಿ ದೂರು ನೀಡಿದ್ದು, ಅದನ್ನು ಪೋಲಿಸರು ನಿರಾಕರಣೆ ಮಾಡಿದ್ದ ವಿಚಾರವನ್ನು ವಾದಿಯು ಹೇಳಿಕೊಟ್ಟಂತೆ ಹೇಳಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂದಿಸಿದ ಕಂದಾಯ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ನಿಡಿ-1 ಮತ್ತು 2 ಪ್ರತಿವಾದಿಯ ಆಸ್ತಿ ಆಗಿರುತ್ತದೆ, ಸಾಕ್ಷಿ ಮುಂದುವರಿದು ದೊಡ್ಡ ಗಿಡಗಳನ್ನು ತಂದು ಹೂಳಿದ್ದಾರೆ ಎಂದು ನುಡಿಯುತ್ತಾರೆ. ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸಿ ಷೆಡ್ಯೂಲ್ ಆಸ್ತಿಯಲ್ಲಿ ದಾರಿ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯ ಹೇಳಿಕೆ ಮೇರೆಗೆ ಸಿ ಷೆಡ್ಯೂಲ್ ಆಸ್ತಿ ಅಸ್ಥಿತ್ವದಲ್ಲಿ ಇಲ್ಲದೇ ಇದ್ದರ, ಸುಳ್ಳು ಮಾಹಿತಿ ನೀಡಿದ್ದೇನೆ ಎಂದರೆ ಸರಿಯಲ್ಲ.

**(ಮರು ವಿಚಾರಣೆ: ಇಲ್ಲ.)**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಎ. ಒಪ್ಪಲಾಗಿದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ದೇವನಹಳ್ಳಿ.**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ.26.06.2024**

## ಮುಂದುವರಿದ ವಾಟಿ ಸವಾಲುಃ ಪ್ರತಿವಾದಿ ಪರ ಶ್ರೀ.ಎನ್ ಆರ್ ಆರ್ ವಕೀಲರಿಂದಃ

4. ಈ ದಾವೆಯನ್ನು ನಾನು 2 ಆಸ್ತಿಗೆ ಸಂಬಂದಿಸಿದಂತೆ ಸಲ್ಲಿಸಿರುತ್ತೇನೆ. ಮುನಿಶಾಮಪ್ಪ ನನ್ನ ಅಣ್ಣ. ನನ್ನ ಅಣ್ಣ ದಾರಿ ಇದೆ ಎಂದು ಭೂ ಮಾಪಕರು, ತಹಶೀಲ್ದಾರ್ ರವರಿಗೆ ಅರ್ಜಿ ಸಲ್ಲಿಸಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆ ರೀತಿ ನನ್ನ ಅಣ್ಣ ಸರ್ವೆ ನಂ.120, 153 ಮತ್ತು ಅದರ ಸುತ್ತ ಮುತ್ತ ಇರುವ ಆಸ್ತಿಗಳಲ್ಲಿ ದಾರಿ ಬೇಕು ಎಂದು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ತದ ನಂತರ ಭೂ ಮಾಪಕರು ಸ್ಥಳಕ್ಕೆ ಬಂದು ಅಳತೆ ಮಾಡಿ ದಾವಾ ಆಸ್ತಿ ಸುತ್ತ ಮುತ್ತ ಯಾವುದೇ ದಾರಿ ಇರುವುದಿಲ್ಲ ಎಂದು ಮಹಜರ್ ಮಾಡಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂ.153/1 ಎ ಷೆಡ್ಯೂಲ್ ಆಸ್ತಿಯು ಪ್ರತಿವಾದಿಗಳ ಆಸ್ತಿ ಎಂದರೆ ಸರಿ. ಸಾಕ್ಷಿಗೆ ಈಗ ಸದರಿ ಆಸ್ತಿಯ ಪೋಟೊಗಳನ್ನು ತೋರಿಸಲಾಗಿ, ಅದನ್ನು ಸಾಕ್ಷಿ ನೋಡಿ ಒಪ್ಪಿದ ಕಾರಣ ಅದನ್ನು ನಿಡಿ-1 ರಿಂದ 3 ಎಂದು ಗುರುತಿಸಲಾಯಿತು. ಅವುಗಳಲ್ಲಿ ಶ್ರೀಗಂಧದ ಮರ ಹಾಕಲಾಗಿದೆ ಎಂದರೆ ಸರಿ.

5. ನಿಡಿ-1 ರಿಂದ 3 ರ ಸುತ್ತ ಕಲ್ಲು ಕಾಂಪೌಂಡ್ ನಿರ್ಮಾಣ ಮಾಡಿದ್ದಾರೆ ಎಂದರೆ ಸರಿ. ಆ ಕಾರಣದಿಂದ ದಾರಿ ಇರುವುದಿಲ್ಲ ಎಂದರೆ ಸಾಕ್ಷಿ ಹಿಂದೆ ಇತ್ತು ಎಂದು ನುಡಿಯುತ್ತಾರೆ. ಆ ರೀತಿ ದಾರಿ ಹಿಂದೆ ಇತ್ತು ಎಂದು ತೋರಿಸಲು ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಆ ರೀತಿ ದಾರಿ ಇದ್ದ ಬಗ್ಗೆ ಕಂದಾಯ ದಾಖಲಾತಿಗಳನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ನಾನು ಹಾಜರು ಪಡಿಸಿರುವ ಪಹಣಿಗಳಲ್ಲಿ ದಾರಿ ಇರುವ ಬಗ್ಗೆ ತೋರಿಸಿರುವುದಿಲ್ಲ ಎಂದರೆ ಸರಿ. ವಾದ ಪತ್ರದಲ್ಲಿ ಸಿ ಷೆಡ್ಯೂಲ್ ಚೆಕ್ಕುಬಂದಿಯು ಅಸ್ಥಿತ್ವದಲ್ಲಿ ಇಲ್ಲದೇ ಇದ್ದರೂ ಸೃಷ್ಟಿಮಾಡಿದ್ದೇವೆ ಎಂದರೆ ಸರಿಯಲ್ಲ. ಆ ರೀತಿ ಸಿ ಷೆಡ್ಯೂಲ್ ಇರುವ ಬಗ್ಗೆ ನಕ್ಷೆಯನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ಪ್ರತಿವಾದಿಗಳ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ನಮ್ಮ ಅನುಕೂಲಕ್ಕೆ ತಕ್ಕಂತೆ ಸಿ ಷೆಡ್ಯೂಲ್ ಆಸ್ತಿಯನ್ನು ಸೃಷ್ಟಿಮಾಡಿದ್ದೇವೆ ಎಂದರೆ ಸರಿಯಲ್ಲ.

6. ಎ ಷೆಡ್ಯೂಲ್ ಆಸ್ತಿಯ ಒಟ್ಟು ವಿಸ್ತೀರ್ಣ 1 ಎಕರೆ ಇದ್ದು, ಆ ಪೈಕಿ 2 ಗುಂಟೆ ಖರಾಬು ಎಂದರೆ ಸರಿ. ಸದರಿ ಆಸ್ತಿಗೆ ಚೆಕ್ಕುಬಂದಿ ಪೂರ್ವಕ್ಕೆ-ನಮ್ಮದೇ ಆಸ್ತಿ, ಪಶ್ಚಿಮಕ್ಕೆ-ರಸ್ತೆ ಮತ್ತು ಆಂಜಿನಪ್ಪ ನ ಸ್ವತ್ತು,

ಉತ್ತರಕ್ಕೆ-ಸ್ವಾಮಿ ಕಾಂಪೌಂಡ್, ದಕ್ಷಿಣಕ್ಕೆ-ಹನುಮೇಗೌಡ ಸ್ವತ್ತು ಇರುತ್ತದೆ ಎಂದರೆ ಸರಿ. ಎ ಷೆಡ್ಯೂಲ್ ಆಸ್ತಿಯು ಮೂಲತಃ ಇನಾಮ ಆಸ್ತಿ ಎಂದರೆ ಸರಿ. ಪ್ರತಿವಾದಿಗಳ ತಂದೆ ಪಾಪಣ್ಣ ರವರಿಗೆ 1962 ರಲ್ಲಿ ಮಂಜೂರಾಗಿದೆ ಎಂದರೆ ಸರಿ. ಅವಾಗಿನಿಂದಲೂ ಪಾಪಣ್ಣ ಮತ್ತು ಅವರ ಕುಟುಂಬದವರು ವಾಸವಾಗಿದ್ದಾರೆ ಎಂದರೆ ಸರಿ. ದಿಃ07.12.2010 ರಲ್ಲಿ ಪಾಪಣ್ಣ ತೀರಿಕೊಂಡರು ಎಂದರೆ ಸರಿ. ದಿಃ.17.09.1998 ರಲ್ಲಿ ಆಂಜಿನಪ್ಪ ಮತ್ತು ಅವರ ಕುಟುಂಬದವರು ಎ ಷೆಡ್ಯೂಲ್ ಮತ್ತು ಇತರ ಆಸ್ತಿಗಳನ್ನು ವಿಭಾಗ ಮಾಡಿಕೊಂಡರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅವಾಗಿನಿಂದಲೂ ಎ ಷೆಡ್ಯೂಲ್ ಆಸ್ತಿಯಲ್ಲಿ 1 ನೇ ಪ್ರತಿವಾದಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿ. 1 ನೇ ಪ್ರತಿವಾದಿಯ ಹೆಸರಿನಲ್ಲಿ ಖಾತೆ ಪಹಣಿ ಬರುತ್ತಿದೆ ಎಂದರೆ ಸರಿ.

7. ನಿಡಿ-1 ರಿಂದ 3 ರಂತೆ 1 ನೇ ಪ್ರತಿವಾದಿ ತನ್ನ ಎಲ್ಲಾ ಆಸ್ತಿಗೆ ಕಾಂಪೌಂಡ್ ನಿರ್ಮಾಣ ಮಾಡಿಕೊಂಡಿದ್ದಾರೆ ಎಂದರೆ ಸರಿ. ಸಿ ಷೆಡ್ಯೂಲ್ ಆಸ್ತಿಯು ಅಸ್ಥಿತ್ವದಲ್ಲಿ ಇಲ್ಲದೇ ಇದ್ದರೂ ಸುಳ್ಳು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ತೊಂದರೆ ಕೊಡಬೇಕೆಂದು ಸುಳ್ಳು ದಾವೆ ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ರಸ್ತೆ ಇಲ್ಲದೇ ಇರುವ ಕಾರಣ ದಿಃ20.03.2022 ರಂದು ಪ್ರತಿವಾದಿಗಳು ತೊಂದರೆ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಕೋರಿರುವ ಪರಿಹಾರವನ್ನು ಪಡೆದುಕೊಳ್ಳಲು ಅರ್ಹನಾಗಿರುವುದಿಲ್ಲ ಎಂದರೆ ಸರಿಯಲ್ಲ.

**(ಮರು ವಿಚಾರಣೆಃ ಇಲ್ಲ.)**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಎ. ಒಪ್ಪಲಾಗಿದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ದೇವನಹಳ್ಳಿ.**

ಪಿಡಬ್ಲೂ-1 ಓ.ಎಸ್.ನಂ.171/2022

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ.08-04-2024**

**ಪಾಟಿ ಸವಾಲುಃ ಪ್ರತಿವಾದಿ ಪರ ಶ್ರೀ.ಎಸ್ ಆರ್ ಆರ್ ವಕೀಲರಿಂದಃ**

1. ಈ ದಾವೆಯನ್ನು ನಾನು ದಾರಿಯ ಸಲುವಾಗಿ ಸಲ್ಲಿಸಿರುತ್ತೇನೆ. ಈ ದಾವೆಯನ್ನು ಸರ್ವೆ ನಂ. 130/1 ಆಸ್ತಿಯ ಪರಿಹಾರ ಕೋರಿ ದಾವೆಯನ್ನು ಸಲ್ಲಿಸಿರುತ್ತೇನೆ ಅದರ ವಿಸ್ತೀರ್ಣ 0-38 ಗುಂಟೆಯಾಗಿರುತ್ತದೆ. ಸಾಕ್ಷಿಯು ಮುಂದುವರೆದು ದಾವಾ ಆಸ್ತಿ ಸರ್ವೆ ನಂ. 153/1 ಆಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಆಸ್ತಿ ಪ್ರತಿವಾದಿಯದ್ದಾಗಿರುತ್ತದೆ. ನಾನು ಈ ದಾವೆಯನ್ನು ಕೇವಲ ಒಂದೇ ಸರ್ವೆ ನಂ. ಆಸ್ತಿಯ ಮೇಲೆ ಸಲ್ಲಿಸಿರುತ್ತೇನೆ. ದಾವಾ ಸಿ ಷೆಡ್ಯುಲ್ ಆಸ್ತಿಯು ಅಸ್ತಿತ್ವದಲ್ಲಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸಿ ಷೆಡ್ಯುಲ್ ಆಸ್ತಿಯು ಅಸ್ತಿತ್ವದಲ್ಲಿರುವ ಬಗ್ಗೆ ಯಾವುದೇ ದಾಖಲಾತಿ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಆ ರೀತಿ ಯಾವುದೇ ದಾಖಲಾತಿ ಹಾಜರುಪಡಿಸದೇ ಇದ್ದರೂ ಸಿ ಷೆಡ್ಯೂಲ್ ಆಸ್ತಿಯು ಅಸ್ತಿತ್ವದಲ್ಲಿದೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

2. ಪ್ರತಿವಾದಿ ಸಲ್ಲಿಸಿರುವ ತಕರಾರಿನ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿಯು ತನ್ನ ಪ್ರತಿವಾದ ಪತ್ರದಲ್ಲಿ ದಾವಾ ಸಿ ಷೆಡ್ಯುಲ್ ಆಸ್ತಿಯು ಅಸ್ತಿತ್ವದಲ್ಲಿರುವುದಿಲ್ಲ ಮತ್ತು ಚೆಕ್ಕುಬಂದಿ ಸರಿ ಇರುವುದಿಲ್ಲ ಎಂದು ತಿಳಿಸಿದ್ದಾರೆ ಎಂದರೆ ಸಾಕ್ಷಿ ಚೆಕ್ಕುಬಂದಿ ಸರಿ ಇದೆ ಎಂದು ನುಡಿಯುತ್ತಾರೆ. ವಾದದ ಪತ್ರದ ಕಂಡಿಕೆಯಲ್ಲಿ ಬೇರೆ ರೀತಿ ಸಂಗತಿಯನ್ನು ತೆಗೆದುಕೊಂಡಿದ್ದು ಷೆಡ್ಯೂಲ್ನಲ್ಲಿ ಬೇರೆ ನಮೂದು ಮಾಡಿದ್ದೇವೆ ಎಂದರೆ ಸರಿಯಲ್ಲ. ನನ್ನ ಆಸ್ತಿಯ ಸರ್ವೆ ನಂ. 153/2 ರಲ್ಲಿ 1 ಎಕರೆ 0-27 ಗುಂಟೆ ಇರುತ್ತದೆ. ಪ್ರತಿವಾದಿಯ ಸಿ ಷಡ್ಯೂಲ್ ಜಮೀನಿನಲ್ಲಿ ಯಾವುದೇ ರಸ್ತೆ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 5 ರಲ್ಲಿ ರಸ್ತೆ ಇರುವ ಬಗ್ಗೆ ಯಾವುದೇ ನಮೂದು ಇರುವುದಿಲ್ಲ ಎಂದರೆ ಸರಿಯಲ್ಲ. ಆ ರೀತಿ ಸಿ ನಷೆಡ್ಯೂಲ್ ಆಸ್ತಿಯಲ್ಲಿ ರಸ್ತೆ ಇದೆ ಎಂದು ನವೇ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ.

3. ದಿನಾಂಕ 20-03-2022 ರಂದು ಪ್ರತಿವಾದಿಯು ಸಿ ಷೆಡ್ಯೂಲ್ ಆಸ್ತಿಗೆ ತೊಂದರೆ ಕೊಟ್ಟರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಿ ಷೆಡ್ಯೂಲ್ ಆಸ್ತಿ ಅಸ್ತಿತ್ವದಲ್ಲಿ ಇಲ್ಲದೇ ಇರುವ ಕಾರಣ ನನ್ನ ಸ್ವಾಧೀನಕ್ಕೆ ತೊಂದರೆ ಕೊಡುವ ಪ್ರಶ್ನೆ ಬರುವುದಿಲ್ಲ ಎಂದರೆ ಸರಿಯಲ್ಲ. ಪೋಲೀಸರಿಗೆ ಯಾವುದೇ ದೂರು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪೋಲೀಸರು ಯಾವುದೇ ದೂರು ಸ್ವೀಕರಿಸಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಪೋಲೀಸ್ ಠಾಣೆಗೆ ಹೋಗದೇ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಮುಂದುವರಿದ ಪಾಟಿ ಸವಾಲಿಗೆ ಕಾಲವಕಾಶ ಕೋರಿದ್ದು, ನೀಡಲಾಯಿತು.)**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಎ. ಒಪ್ಪಲಾಗಿದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ದೇವನಹಳ್ಳಿ.**